ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ:ಸಿ4(4).ಪ್ರೌ.ಶಿ/ದೈ.ಶಿ.ಗ್ರೇಡ್-1.ಜೇ.ಪಟ್ಟಿ-14/2019-20 ದಿನಾಂಕ:28.05.2021

-:ಸುತ್ತೋಲೆ:-

ವಿಷಯ: ರಾಜ್ಯ ಮಟ್ಟದ ಸರ್ಕಾರಿ ಪ್ರೌಢ ಶಾಲಾ ಗ್ರೇಡ್-1 ದೈಹಿಕ ಶಿಕ್ಷಕರ ವೃಂದದ ಮೆರಿಟ್ ಆಧಾರಿತ ದಿನಾಂಕ:01.01.2019ರಲ್ಲಿ ಇದ್ದಂತೆ ಸರ್ಕಾರಿ ಪ್ರೌಢಶಾಲಾ ಗ್ರೇಡ್-1 ದೈಹಿಕ ಶಿಕ್ಷಕರ ವೃಂದದ (371ಜೆ) ಅಂತಿಮ ಜೇಷ್ಠತಾ ಪಟ್ಟಿಯನ್ನು ಆಕ್ಷೇಪಣೆ ಸಲ್ಲಿಸುವ ದಿನಾಂಕ ವಿಸ್ತರಿಸುವ ಕುರಿತು.

ಉಲ್ಲೇಖ: 01. ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ: ದಿನಾಂಕ: 07.11.2020
ದಿನಾಂಕ: 19.05.2021

&&&&&&

ಉಲ್ಲೇಖ(1)ರ ದಿನಾಂಕ: 19.05.2021 ರಂತೆ ರಾಜ್ಯ ಮಟ್ಟದ ಸರ್ಕಾರಿ ಪ್ರೌಢ ಶಾಲಾ ಗ್ರೇಡ್-1 ದೈಹಿಕ ಶಿಕ್ಷಕರ ವೃಂದದ ಮೆರಿಟ್ ಆಧಾರಿತ ದಿನಾಂಕ:01.01.2019ರಲ್ಲಿ ಇದ್ದಂತೆ ಸರ್ಕಾರಿ ಪ್ರೌಢಶಾಲಾ ಗ್ರೇಡ್-1 ದೈಹಿಕ ಶಿಕ್ಷಕರ ವೃಂದದ ರವರ(371ಜೆ) ಅಂತಿಮ ಜೇಷ್ಠತಾ ಪಟ್ಟಿಯನ್ನು www.schooleducation.kar.nic.in ಪ್ರಕಟಿಸಲಾಗಿರುತ್ತದೆ.

ಈ ಕುರಿತು ದೈಹಿಕ ಶಿಕ್ಷಣ ಶಿಕ್ಷಕರುಗಳು ಈ ಕಚೇರಿಗೆ ಸಲ್ಲಿಸಿರುವ ಮನವಿಗಳನ್ನು ಪರಿಶೀಲಿಸಲಾಗಿ ಕೋವಿಡ್-19ರಿಂದ ದಿನಾಂಕ: 07.06.2021ರವರೆಗೆ ರಾಜ್ಯದಲ್ಲಿ ಲಾಕ್‌ಡೌನ್ ಘೋಷಣೆ ಮಾಡಿರುವ ಪ್ರಯುಕ್ತ ಆಕ್ಷೇಪಣೆ ಮಾಹಿತಿಗಳನ್ನು ಸಂಬಂಧಿಸಿದವರಿಂದ ದೃಢೀಕರಿಸಿ ಸಲ್ಲಿಸಲು ಕಾಲವಕಾಶ ಕೋರಿರುವ ಹಿನ್ನಲೆಯಲ್ಲಿ 371ಜೆ ದೈಹಿಕ ಶಿಕ್ಷಣ ಶಿಕ್ಷಕರ ಅಂತಿಮ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಗಳನ್ನು ನೀಡುವ ಅವಧಿಯನ್ನು ದಿನಾಂಕ: 10.06.2021ರವರೆಗೆ ವಿಸ್ತರಿಸಲಾಗಿದೆ. ಆಕ್ಷೇಪಣೆಗಳನ್ನು ಸಲ್ಲಿಸುವಂತ ಶಿಕ್ಷಕರುಗಳು ಲಗತ್ತಿಸಿದ ನಿಗದಿತ ನಮೂನೆಯಲ್ಲಿ ಕ್ರಮಬದ್ಧವಾಗಿ ನಮೂದಿಸಿ ಅದಕ್ಕೆ ಪೂರಕ ದಾಖಲೆಗಳೊಂದಿಗೆ ಸಂಬಂಧಿಸಿದವರಿಂದ ದೃಢೀಕರಿಸಿಕೊಂಡು ನೇರವಾಗಿ ಉಪನಿರ್ದೇಶಕರ ಕಛೇರಿಗೆ ದಿನಾಂಕ: 10.06.2021ರಂದು ಅಪರಾಹ್ನ 4.30ರೊಳಗೆ ಆಕ್ಷೇಪಣೆಗಳನ್ನು ನೀಡಲು ಸೂಚಿಸಿದೆ. ಈ ಅವಧಿ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ)ರವರು ಶಿಕ್ಷಕರುಗಳಿಂದ ಬಂದಂತಹ ಆಕ್ಷೇಪಣೆಗಳನ್ನು ಪರಿಶೀಲಿಸಿಕೊಂಡು ದೃಢೀಕರಣದೊಂದಿಗೆ ನಿಗಧಿತ ನಮೂನೆಯಲ್ಲಿ ದಿನಾಂಕ:11.06.2021ರಂದು ಈ ಕಛೇರಿಗೆ ಖುದ್ದಾಗಿ ಸಲ್ಲಿಸಲು ತಿಳಿಸಿದೆ. (ನಮೂನೆ ಲಗತ್ತಿಸಿದೆ.)

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

(ಕೃಷ್ಣಾಜಿ.ಎಸ್.ಕರಿಚಣ್ಣವರ)
ನಿರ್ದೇಶಕರು (ಪ್ರೌಢಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

ಗೆ,

ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.

2) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.

3) ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ ವಿಭಾಗ ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.

4) ಜಂಟಿ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ

5) ಹಿರಿಯ ಸಹಾಯಕ ನಿರ್ದೇಶಕರು(ಇ-ಆಡಳಿತ), ಆಯುಕ್ತರ ಕಛೇರಿ,ಬೆಂಗಳೂರು ಇವರಿಗೆ ಈ ಸುತ್ತೋಲೆಯನ್ನು ಇಲಾಖೆಯ ಅಂತರ್ಜಾಲ www.schooleducation.kar.nic.in ರಲ್ಲಿ ಪ್ರಕಟಿಸಲು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದೆ.

6) ಕಛೇರಿ ಪ್ರತಿ

01-01-2019ರಲ್ಲಿದ್ದಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರೌಢಶಾಲಾ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ(371ಜೆ) ಅಂತಿಮ ಜ್ಯೇಷ್ಠತಾ ಪಟ್ಟಿಗೆ ಆಕ್ಷೇಪಣೆ (ಪ್ರಕಟಣೆ ದಿನಾಂಕ:19.05.2021)

| ವಿವರ | NEW SENIORITY NO | BLOCK NO | NAME AND SCHOOL ADDRESS | DISTRICT | DISISION | DATE OF BIRTH | ENTRY IN TO SERVICE | QUALIFICATION | MODE OF APPOINTMENT | DATE OF SELECTION /PROMOTION ON TO THE CADRE OF SEC SCL PE TEACHER GR-1 | YEAR | CATEGORY | MERIT | ELIGIBLE DATE | 371J | REMARKS |
|---|---|---|---|---|---|---|---|---|---|---|---|---|---|---|---|---|
| ಹಾಲಿ ಇರುವ ವಿವರ | | | | | | | | | | | | | | | | |
| ತಿದ್ದುಪಡಿಯಾಗ ಬೇಕಾದ ವಿವರ | | | | | | | | | | | | | | | | |
| ಸಮರ್ಥನೆಯೊಂದಿಗೆ ಲಗತ್ತಿಸಿರುವ ದಾಖಲೆಗಳು | | | | | | | | | | | | | | | | |

ವಿಶೇಷ ಸೂಚನೆ:- ಆಕ್ಷೇಪಣೆ ಸಲ್ಲಿಸುವ 371 ಜೆ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರು ನಮೂನೆಯೊಂದಿಗೆ ಅಂತರ್ಜಾಲದಲ್ಲಿ ಪ್ರಕಟಿಸಿರುವ ಅಂತಿಮ ಜ್ಯೇಷ್ಠತಾಪಟ್ಟಿಯಲ್ಲಿ ತಮ್ಮ ಹೆಸರಿರುವ ಪುಟದ ಪ್ರಿಂಟ್ ಔಟ್ ಪ್ರತಿ ಲಗತ್ತಿಸಿ ಸಲ್ಲಿಸಬೇಕು.

ದಿನಾಂಕ:-

ದೃಢೀಕರಣ

ಶಿಕ್ಷಕರ ಹೆಸರು, ಸಹಿ ಮತ್ತು ಶಾಲೆಯ ವಿಳಾಸ

ಸ್ಥಳ:-

ಮುಖ್ಯ ಶಿಕ್ಷಕರು ಮೊಹರಿನೊಂದಿಗೆ

ಮೊಬೈಲ್ ಸಂಖ್ಯೆ

**ಉಪನಿರ್ದೇಶಕರ ಷರಾಗಳು:-**

01. ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ ತಿದ್ದುಪಡಿಗಾಗಿ ಶಿಫಾರಸ್ಸು ಮಾಡಿದೆ.

ಅಥವಾ

02. ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ ಈ ಕೆಳಕಂಡ ಕಾರಣಗಳಿಂದ/ಹಿಂಬದಿ ಪುಟದಲ್ಲಿ ತೋರಿದ ಕಾರಣಗಳಿಗಾಗಿ ತಿರಸ್ಕರಿಸಿದೆ.

ಪರಿಶೀಲಿಸಿ ದೃಢೀಕರಿಸಿದೆ

ಉಪನಿರ್ದೇಶಕರು(ಆಡಳಿತ)

ಸಾ.ಶಿ.ಇ- - - - - - - - - - ಜಿಲ್ಲೆ